# ಅಂಶ - 15 ಲಲಿತ ಪ್ರಬಂಧ

ವಿಷಯಕ್ರಮ

15.0 ಉದ್ದೇಶ
15.1 ಪೀಠಿಕೆ
15.2 ಪಠ್ಯ
15.2.1 ಕಠಿಣ ಶಬ್ದಾರ್ಥ
15.2.2 ಕವಿ ಕೃತಿ ಪರಿಚಯ
ಅಭ್ಯಾಸ - 1
ಅಭ್ಯಾಸ - 2
15.3 ಸಾರಾಂಶ
ಅಭ್ಯಾಸಗಳಿಗೆ ಉತ್ತರಗಳು

## 15.0 ಉದ್ದೇಶ

- ಲಲಿತ ಪ್ರಬಂಧದ ರೂಪ ಗೊತ್ತಾಗುತ್ತದೆ.
- ಯಾವ ವಸ್ತುವನ್ನು ಕುರಿತಾದರೂ ಪ್ರಬಂಧ ರಚನೆ ಮಾಡಬಹುದೆಂಬ ಮಾತನ್ನು ಅರಿಯುವಿರಿ.
- ಸಾಂಸ್ಕೃತಿಕ ಚಿತ್ರಣವೇ ಲಲಿತ ಪ್ರಬಂಧದಲ್ಲಿ ಪ್ರಮುಖ ಅಂಶವಾಗಿರುತ್ತದೆ ಎಂದು ನೋಡುವಿರಿ.
- ಲಲಿತ ಪ್ರಬಂಧದ ರಸ ಯಾವುದೂ ಇರಬಹುದು, ಆದರೆ ಹಾಸ್ಯ ಪ್ರಧಾನವಿದ್ದಷ್ಟು ಲಲಿತ ಪ್ರಬಂಧ ರೋಚಕವಾಗುತ್ತದೆ ಎಂದು ತಿಳಿಯುವಿರಿ.
- ಮಲೆನಾಡಿನ ಸಂಸ್ಕೃತಿಯ ಒಂದು ನಮೂನೆಯನ್ನು ನೋಡುವಿರಿ.

## 15.1 ಪೀಠಿಕೆ

ಲಲಿತ ಪ್ರಬಂಧವೂ ಒಂದು ಸಾಹಿತ್ಯ ಪ್ರಕಾರ. ಪ್ರಬಂಧಗಳಲ್ಲಿ ಗಂಭೀರ ಪ್ರಬಂಧ, ಲಲಿತ ಪ್ರಬಂಧ ಎಂದು ಎರಡು ಮುಖ್ಯ ವಿಭಾಗಗಳನ್ನು ಮಾಡಬಹುದು. ಸಂಸ್ಕೃತಿ, ಭಾಷೆ ಸಾಹಿತ್ಯವನ್ನು ಕುರಿತು ಗಂಭೀರ ಪ್ರಬಂಧವನ್ನು ಅನೇಕರು ಬರೆದಿದ್ದಾರೆ. ಆದರೆ ಲಲಿತ ಪ್ರಬಂಧಗಳು ಲಘುವಾಗಿ ಇದ್ದು ಓದಲು ಹಗುರಾಗಿರುತ್ತವೆ. ಹಾಸ್ಯದ ಮೊನೆಯಿಂದಲೋ, ವ್ಯಂಗ್ಯೋಕ್ತಿಗಳಿಂದಲೋ, ಲೇವಡಿ ಎಬ್ಬಿಸಿಯೋ, ಸಮಾಜಕ್ಕೆ ಪಾಠ ಕಲಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಕೆಲವೊಮ್ಮೆ ಮನರಂಜನೆಗಾಗಿ ನವಿರಾದ ಹಾಸ್ಯವೇ ಪ್ರಧಾನವಾಗಿರುತ್ತದೆ.

ಲಲಿತ ಪ್ರಬಂಧಕಾರರಲ್ಲಿ, ಕುವೆಂಪು, ಬೇಂದ್ರೆ, ಗೊರೂರು ರಾಮಸಾವಮೈಯಂಗಾರ್, ಎನ್.ಎಸ್. ಗದಗಕರ, ಬಿ.ಆರ್.ವಾಡಪ್ಪಿ, ರಾಶಿ, ಮೊದಲಾದವರ ಹೆಸರುಗಳು ಪ್ರಖ್ಯಾತವಾಗಿವೆ. ಇತ್ತೀಚಿನ ಲಲಿತ ಪ್ರಬಂಧಗಳಲ್ಲಿ ವ್ಯಂಗ್ಯೋಕ್ತಿ, ಕಟಕಿ, ಲೇವಡಿ, ಮೊದಲಾದವುಗಳು ಹೆಚ್ಚು ಪ್ರಚಲಿತವಾಗಿರುತ್ತಿವೆ. ಆದರೆ ಶುದ್ಧ ಮನಸ್ಸಿನ ಲಲಿತ ಪ್ರಬಂಧ ಯಾವಾಗಲೂ ಶ್ರೇಷ್ಠವೆನಿಸುತ್ತದೆ, ನಗುಮುಖದಿಂದ ಕಲಿಸಿದ ಪಾಠ ಬಹಳ ದಿನ ನೆನಪುಳಿಯುತ್ತದೆ.

ಈ ಪ್ರಬಂಧದಲ್ಲಿ ಮಲೆನಾಡಿನ ಜನಜೀವನದ ವಿಶೇಷಗಳು ಚಿತ್ರಿತವಾಗಿವೆ. ಕಾಲ ಕಳೆದಂತೆ ಹಳೆ ತಲೆಮಾರಿನ ಜನರೂ ಮರೆಯಾಗುತ್ತಿದ್ದಾರೆ, ಅವರ ರೂಢಿ ವ್ಯವಹಾರಗಳೂ ಲುಪ್ತವಾಗುತ್ತಿವೆ. ಆದರೆ ಇಂದಿನ ತಲೆಮಾರಿನ ಜನರಿಗೆ ಎಲ್ಲವೂ ಹೊಸ ಅನುಭವವೇ. ಅಂಥ ಅನುಭವವನ್ನು ಕುವೆಂಪು ಅವರು ಎಂದೂ ಮರೆಯದಂತೆ ಚಿತ್ರಿಸಿದ್ದಾರೆ.

## 15.2 ಪಠ್ಯ

**ಅಜ್ಜಯ್ಯನ ಅಭ್ಯಂಜನ**

ಮಲೆನಾಡಿನ ಜೀವನವನ್ನು ಸಾಮಾನ್ಯವಾಗಿ ನಿರುದ್ವಿಗ್ನ ಎಂದು ಕರೆಯಬಹುದು. ನಗರಗಳಲ್ಲಿರುವಂತೆ ದುತ್ತಪದ ಸಂಚಾರವಿಲ್ಲ; ಮೋಟಾರು ಮೊದಲಾದ ಆತುರದ ಯಾನಗಳ ಗಡಿಬಿಡಿಯಿಲ್ಲ; ಸಿನೀಮಾ — ನಾಟಕಶಾಲೆಗಳ ಉದ್ವೇಗವಿಲ್ಲ; ಚಿತ್ರವಿಚಿತ್ರವಾದ ವರ್ತಮಾನ ಸಂಕುಲದಿಂದ ಸಮಾಚ್ಛನ್ನವಾಗಿ ಶಾಂತಿಭಂಗಕಾರಿಗಳಾಗಿರುವ ಚಿತ್ರಗುಪ್ತನ ದಪ್ತರದಂತಿರುವ ಪತ್ರಿಕೆಗಳ ಗಲಭೆಯಂತೂ ಬಹಳಮಟ್ಟಿಗೆ ಸೊನ್ನೆ. ಸಾಯಂಕಾಲದಲ್ಲಿ ದಿನದ ಬೇಸರವನ್ನು ಪರಿಹರಿಸಿಕೊಳ್ಳಲೆಂದು ಉಪನ್ಯಾಸಮಂದಿರಗಳಿಗೆ ಹೋಗಿ, ನೀರಸವಾದ ಭಾಷಣಗಳನ್ನು ಕೇಳಿ, ಬೇಜಾರಿಗೆ ಬದಲಾಗಿ ಅಶಾಂತಿಯನ್ನು ತುಂಬಿಕೊಂಡು, ಗೊಣಗುತ್ತ ಹಿಂತಿರುಗುವ ಪ್ರಸಂಗಗಳಂತೂ ಒದಗುವುದೇ ಇಲ್ಲ. ಅಲ್ಲಿರುವುದು ಕೇವಲ ಶಾಂತಿ; ವನ್ಯವಾದರೂ ಅನಾಗರಿಕವಲ್ಲದ ಶಾಂತಿ. ಸುತ್ತ ನೋಡಿದರೆ ಮಾಲೆ ಮಾಲೆಯಾದ ಮಲೆಗಳು, ದಟ್ಟವಾದ ಕಾಡುಗಳು; ಅಲ್ಲಿ ಮೌನವನ್ನೇ ಮಲಗಿಸುವ ಜೋಗುಳದಂತಿರುವ ಹಕ್ಕಿಗಳ ಸವಿದನಿ. ಮೇಲೆ ತಲೆಯೆತ್ತಿ ನೋಡಿದರೆ ಆಕಾಶ, ನೀಲಾಕಾಶ; ಅನಂತ, ಅಪಾರ, ಪ್ರಶಾಂತ. ಅಲ್ಲಿ ಸುತ್ತುವ ಬೆಳ್ಮುಗಿಲಿನ ತುಂಡುಗಳೂ ಕೂಡ ಮೆಲ್ಲಗೆ ಚಲಿಸುತ್ತ ಜಗತ್ತನ್ನು ಸ್ವಪ್ನದಿಂದ ಹೊದಿಸುವಂತೆ ತೋರುತ್ತವೆ. ದಾರಿಯಲ್ಲಿ ತೊರೆಗಳೇನೋ ಬಂಡೆಯಿಂದ ಇಳಿದು ಜಾರಿ ಹರಿಯುತ್ತಿರುತ್ತವೆ. ಆದರೆ ಹರಿದಾಟದಲ್ಲಿರುವುದು ತತ್ತ್ವಜ್ಞನ ಔದಾಸೀನ್ಯ; ಯೋಗಿಯ ನಿಷ್ಕಾಮಕರ್ಮ. ಜನಗಳ ನಿತ್ಯಜೀವನದಲ್ಲಿ ಹಲಕೆಲವು ಕ್ಷುದ್ರ ಕ್ಷುದ್ರ ಉದ್ವೇಗಗಳಿರಬಹುದು; ಬಡಸಂಸಾರದ ಸಾಲದ ಶೂಲೆ; ಮನೆಯಲ್ಲಿ ಮಗುವಿಗೆ ಜ್ವರ; ಒಂದು ಎತ್ತನ್ನು ಹುಲಿ ಹಿಡಿದುದರಿಂದ ಈ ಸಾರಿ ಉಳಲು ಒಂದು ಎತ್ತು ಸಾಲದು; ಮಳೆಗಾಲಕ್ಕೆ ಬೇಕಾದ ಕಟ್ಟಿಗೆ ಇನ್ನೂ ಮನೆಗೆ ಬಂದಿಲ್ಲ; ಕೋರ್ಟಿನಲ್ಲಿ ಕೇಸು; ದನಕರುಗಳಿಗೆ ಜಕ್ಕಿಣಿಯ ಕಾಟ — ಇತ್ಯಾದಿ.

ಇಂತಹ ಶಾಂತಿ ಪ್ರಪಂಚದಲ್ಲಿಯೂ ಕ್ರಾಂತಿಕಾಲಗಳಿವೆ. ಜನನ ಸಮಯದಲ್ಲಿ, ಮರಣ ಸಮಯದಲ್ಲಿ, ವಿವಾಹ ಕಾಲದಲ್ಲಿ, ಬೇಟೆಯಲ್ಲಿ ಮನೆಯ ಜನಗಳೆಲ್ಲ ತುಂಬ ಚಟುವಟಿಕೆಯಿಂದಿರುತ್ತಾರೆ. ಪೋಲೀಸರ ಕಾಟ, ಜಮಾಬಂದಿಯ ಊಟ ಇವುಗಳನ್ನು ಉತ್ಕ್ರಾಂತಿಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಚಾರವಾಗಿ ಮುಂದೆ ಹೇಳುತ್ತೇನೆ. ಮೇಲೆ ಹೇಳಿದ ವಿಷಯಗಳನ್ನು ಬಿಟ್ಟರೆ ಇನ್ನೊಂದು ಕ್ರಾಂತಿ ವಿಷಯವಿದೆ. ಅದು ಯಾವುದೆಂದು ಊಹಿಸಬಲ್ಲಿರೇನು? ಇಲ್ಲ; ನಿಮ್ಮಿಂದಾಗುವುದಿಲ್ಲ. ನೀವು ಬಯಲು ಸೀಮೆಯವರು. ಐದೇ ನಿಮಿಷದಲ್ಲಿ ಸ್ನಾನ ಮಾಡಿ, ಎರಡೇ ನಿಮಿಷದಲ್ಲಿ ಊಟ ಮಾಡುವ ಜಾತಿಗೆ ಸೇರಿದವರು! ಹೋಗಲಿ, ನೀವು ಊಹಿಸಲಾಗದಿದ್ದರೆ ನಾನೇ ಹೇಳಿಬಿಡುತ್ತೇನೆ — ಅಭ್ಯಂಜನ! ಬೆರಗಾಗಬೇಡಿ. ನಿಮಗೆ ಗೊತ್ತಿಲ್ಲ. ಮಲೆನಾಡಿನಲ್ಲಿ ಅಭ್ಯಂಜನವೆಂದರೆ ಮಹಾಕಾರ್ಯ. ಅಭ್ಯಂಜನದ ದಿನ ಯಾರು ಸಾಯುತ್ತಾರೆ! ಯಾರು ಉಳಿಯುತ್ತಾರೆ! ಯಾರು ಮೂರ್ಛೆ ಬೀಳುತ್ತಾರೆ! ಹೇಳುವುದೇ ಕಷ್ಟ. ಆದಿನ ಮನೆಯಲ್ಲಿ ಗಲಭೆಯೋ ಗಲಭೆ!

ನಾನು ಚಿಕ್ಕವನಾಗಿದ್ದಾಗ — ಏಕೆಂದರೆ ಈಗ ನಾಗರಿಕತೆ. ಬಂದುದರಿಂದ ಹಿಂದಿನ ಆಚಾರಗಳೆಲ್ಲ ಪರಿವರ್ತನೆಯಾಗಿ ಹೋಗಿವೆ — ನಮ್ಮ ಮನೆಯಲ್ಲಿ 'ಅಭ್ಯಂಗ' ಎಂದರೆ ನಮಗೆಲ್ಲ ಜನನ, ಮರಣ, ವಿವಾಹ, ಪೋಲೀಸರ ಕಾಟ, ಜಮಾಬಂದಿ ಎಲ್ಲವೂ ಒಟ್ಟಿಗೆ ಬಂದ ಹಾಗೆ ಅನುಭವವಾಗುತ್ತಿತ್ತು. ನಾವಾಗ ವಿದ್ಯಾರ್ಥಿಗಳಷ್ಟೆ? ಐಗಳು ನಮ್ಮ ಮನೆಯಲ್ಲಿಯೇ ಕೂಲಿ ಕೆಲಸ ಮಾಡುತ್ತಿದ್ದರು. ನಮಗೆ ಅವರು ಮೇಷ್ಟರಾದರೂ ನಮ್ಮ ಹಿರಿಯರಿಗೆ ಅವರು ಕೂಲಿಯಾಳು. ಐಗಳು ನಮಗೆ ಅ ಆ ಇ ಈ ಹೇಳಿ ಕೊಡುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನ ಮಾಡಿಸುವುದು; ಸಮಯ ಬಿದ್ದರೆ ಬಟ್ಟೆ ಒಗೆದುಕೊಡುವುದು; ಪ್ರಸಂಗ ಒದಗಿದರೆ ಗುಡಿಸುವುದು, ಸನ್ನಿವೇಶ

ಪ್ರಾಪ್ತವಾದರೆ ಯಜಮಾನರ ಕೂಸನ್ನು ಆಡಿಸುವುದು; ಅವರ ವೃತ್ತಿಯಲ್ಲಿ ಅದೂ ಒಂದು ಭಾಗವಾಗಿದ್ದುದರಿಂದ — ಆಳು ಲೆಕ್ಕ ಇಡುವುದು; ಪುಣ್ಯ ಕಾರ್ಯವಾದ್ದರಿಂದ ದೇವರ ಪೂಜೆ ಮಾಡುವುದು; ಇತ್ಯಾದಿ ಇತ್ಯಾದಿ ಚಿಲ್ಲರೆ ಕೆಲಸಗಳನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ನಮಗೆ ಭಾನುವಾರ ರಜಾ; ಜೊತೆಗೆ ಅಭ್ಯಂಜನದ ಸಜಾ. ಆದಿನ ಎಲ್ಲಿಯಾದರೂ ತಿರುಗಾಡಿ, ಹಣ್ಣು ಗಿಣ್ಣು ಕಿತ್ತು, ಮರಗಿರ ಹತ್ತಿ, ಕಲ್ಲುಗಿಲ್ಲು ಹೊಡೆದು, ತಲೆಗಿಲೆ ಒಡೆದು, ಏನಾದರೂ ಒಂದು ಸಾಹಸಗೀಹಸ ಮಾಡಿ ಬೇಜಾರು ಕಳೆದುಕೊಳ್ಳೋಣ ಎಂದರೆ — ಹಾಳು ಅಭ್ಯಂಜನ ಬಂದು ನಮಗೆಲ್ಲ ಬಹಳ ತೊಂದರೆಯಾಗುತ್ತಿತ್ತು. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ ಎಣ್ಣೆ ಸ್ನಾನದ ತೀರ್ಥಯಾತ್ರೆ! ಅದೇನು ಒಬ್ಬರೇ? ಇಬ್ಬರೇ? ಮನೆಯ ಮಂದಿಗೆಲ್ಲ 'ಅಭ್ಯಂಗ'!

ಅವರಲ್ಲಿಯೂ ನಮ್ಮ ಅಜ್ಜಯ್ಯನ ಅಭ್ಯಂಗವೇ ಅರ್ಧ ದಿನವನ್ನು ಆಪೋಶನ ಮಾಡುತ್ತಿತ್ತು. ಅವರು ವಯಸ್ಸಾದವರು; ದೇವರಲ್ಲಿ ಬಹಳ ಭಕ್ತಿ; ಕಳ್ಳನ್ನು ಬಹಳ ಮಿತವರಿತು ತೀರ್ಥದಂತೆ ಪಾನ ಮಾಡುತ್ತಿದ್ದರು. ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠ ಎನ್ನುವುದು ಅವರ ಧ್ಯೇಯೋಕ್ತಿಯಾಗಿತ್ತು. ಅಭ್ಯಂಜನ ಮಾಡಿ ಮಾಡಿ ದೇಹ ಸ್ವಲ್ಪ ಸ್ಥೂಲತೆಯ ಕಡೆಗೆ ಒಲಿದಿತ್ತು. ವಾರಕ್ಕೊಂದು ಅಭ್ಯಂಜನ ಮಾಡುತ್ತಿದ್ದರೆ ಅಮೃತತ್ವ ಲಭಿಸುವುದೆಂದು ಅವರು ತಿಳಿದಿದ್ದಂತೆ ತೋರುತ್ತದೆ. ಆದರೆ ಪಾಪ, ಕೆಲವು ವರುಷಗಳ ಹಿಂದೆ ಅವರು ತೀರಿಕೊಂಡೇಬಿಟ್ಟರು. ಅವರು ಸ್ವರ್ಗಕ್ಕೆ ಹೋದರು ಎಂದು ನಾನು ತಿಳಿದಿದ್ದೇನೆ. ಅಲ್ಲೇನು ಕಡಿಮೆ! ಎಣ್ಣೆ, ಸೀಗೆಕಾಯಿ, ನೀರು, ಬೆಂಕಿ ಬೇಕಾದಷ್ಟಿದೆ! ಅಪ್ಸರೆಯರೂ ಮುಂದೆ ಮುಂದೆ ಇದ್ದಾರೆ. ಅಭ್ಯಂಜನ ಮಾಡಿದ್ದೇ ಮಾಡಿದ್ದು! ಅವರೇನು ಸ್ವರ್ಗದಲ್ಲಿ ದಿನಕ್ಕೆ ಇಪ್ಪತ್ನಾಲ್ಕು ಸಾರಿ ಅಭ್ಯಂಜನ ಮಾಡುತ್ತಾರೋ ಏನೋ! ಮಾಡಲಿ, ಪಾಪ, ಬೇಕಾದಷ್ಟು ಮಾಡಲಿ! ಮಾನವನ ಈಶ್ವರ ಪ್ರೇಮಕ್ಕೆ ಅಷ್ಟಾದರೂ ಪ್ರತಿಫಲ ಬೇಡವೇ? ಒಂದಿಷ್ಟು ಅಭ್ಯಂಜನವನ್ನು ಕೊಡಲಾರದ ದೇವರು ಅಮೃತತ್ವವನ್ನು ಕೊಡಬಲ್ಲನೇ?

ನಮ್ಮ ಮನೆಯಲ್ಲಿ ಸ್ನಾನದ ಇಲಾಖೆಯೇ ಪ್ರತ್ಯೇಕವಾಗಿತ್ತು. ಯಾರಿಗೋ ಸಂಬಳ ಕೊಡಬೇಕೆಂದು ಇಲಾಖೆ ನಿರ್ಮಿತವಾಗಿರಲಿಲ್ಲ. ಪರಂಪರೆಯಿಂದ ಬಂದುದು. ಮಾಮೂಲನ್ನು ತಪ್ಪದೆ ನಡೆಯುತ್ತಿದ್ದ ನಮ್ಮವರು ಬರುವ ಆದಾಯ ತನ್ನ ಮಾಮೂಲನ್ನು ತಪ್ಪಿ ನಡೆದರೂ ಅಭ್ಯಂಜನದ ಮಾಮೂಲನ್ನು ಮಾತ್ರ ಬಿಟ್ಟಿರಲಿಲ್ಲ. 'ಬಚ್ಚಲು ಮನೆ'ಯೇ ಬೇರೆ, (ಇದೇನು? ಕಣ್ಣು ಕಣ್ಣು ಬಿಡುತ್ತಿದ್ದೀರಿ? ನಾನು ಮೊನ್ನೆ ಹೇಳಿದ್ದನ್ನು ಮರೆತಂತಿದೆ! ನೀವು ಹೀಗೆಲ್ಲ ಮರೆತರೆ ನನ್ನ ಹರಟೆ ತುಂಡುಗಡಿದು ಹೋಗುತ್ತದೆ. ನಮ್ಮ ಕಡೆ ಸ್ನಾನದ ಮನೆಗೆ 'ಬಚ್ಚಲು' ಎಂದು ಕರೆಯುತ್ತಾರೆ.) ಬಚ್ಚಲಿನಲ್ಲಿ ಒಂದು ದೊಡ್ಡ ಒಲೆ. ಕಬ್ಬಿಣವನ್ನು ಬೇಕಾದರೂ ಕರಗಿಸಬಹುದು ಅದರಲ್ಲಿ. ಆ ಒಲೆಯ ಬಾಯಿ ಮೂರು ಅಡಿ ಎತ್ತರ, ಮೂರು ಅಡಿ ಅಗಲ. ಒಲೆಯ ಮೇಲೆ ಎರಡು ದೊಡ್ಡ ಹಂಡೆಗಳನ್ನು ಹೂಳಿರುತ್ತಾರೆ. ಅವುಗಳನ್ನು ತೂತು ಬೀಳುವವರೆಗೂ ತೆಗೆಯುವಂತಿಲ್ಲ. ಹೊರಗೆ ತೆಗೆಯಬೇಕಾದರೆ ಅರ್ಧ ಒಲೆಯನ್ನೇ ಕೀಳಬೇಕು. ಆ ಹಂಡೆಗಳ ತುಂಬಾ ನೀರು ಹಾಕಿ ಕಾಯಿಸುತ್ತಾರೆ. ನೋಡಿ, ತಕಪಕ ತಕಪಕ ಕುದಿಯುವವರೆಗೆ. ಅಕ್ಕಿ ಹಾಕಿದರೆ ತಕ್ಷಣ ಅನ್ನ ಆಗಿ ಹೋಗುತ್ತೆ. ಆ ಒಲೆಯ ಬೆಂಕಿಯೇ ಮೂರು ನಾಲ್ಕು ಹೆಣಗಳನ್ನು ಆರೇಳು ನಿಮಿಷಗಳಲ್ಲಿ ಸುಟ್ಟು ಬೂದಿ ಮಾಡಿಬಿಡಬಹುದು! ಕಟ್ಟಿಗೇನು ಮಲೆನಾಡಿನಲ್ಲಿ! ನಾನು ನೀವೂ ಇಬ್ಬರೇ ಹೊರಟರೆ ಹತ್ತೇ ನಿಮಿಷಗಳ ಒಳಗೆ ಏನು ಕಡಿಮೆ ಎಂದರೂ ಒಂದು ಗಾಡಿ ಕಟ್ಟಿಗೆ ಒಟ್ಟು ಮಾಡಬಹುದು. ಸಣ್ಣ ಕಡ್ಡಿಗಳನ್ನಲ್ಲ; ಮೈಸೂರಿನ ಬೀದಿಯ ಸಾಲು ಮರಗಳಲ್ಲಿ ಕತ್ತಿದೋಟಿಯಿಂದ ಕ್ಷಯರೋಗ ಹಿಡಿದ ಗಿಡಗಳ ತುದಿಯ ಕೊಂಬೆಗಳನ್ನು ಮುರಿದು ತೆಗೆದುಕೊಂಡು ಹೋಗುತ್ತಾರಲ್ಲಾ, ಅಂಥಾ ಕಡ್ಡಿಗಳನ್ನಲ್ಲ; ದೊಡ್ಡ ದೊಡ್ಡ ಕುಂಟೆಗಳನ್ನು! ನಮ್ಮ ಬಚ್ಚಲು ಮನೆಯ ಬೆಂಕಿ ಎಂದರೆ ಏನೆಂದು ತಿಳಿದಿದ್ದೀರಿ ಸ್ವಾಮಿ? ಬಡಬಾಗ್ನಿಯ ಮರಿ.! ಸಾಕ್ಷಾತ್ ಬಡಬಾಗ್ನಿಯ ಮರಿ!

ಭಾನುವಾರ ಅಭ್ಯಂಜನ ಎಂದರೆ ಅರ್ಧ ಡಬ್ಬ ಹರಳೆಣ್ಣೆ, ಎರಡು ಬುತ್ತಿ ಸೀಗೆ ಪುಡಿ, ಮನೆ ಲೆಕ್ಕಕ್ಕೆ ಖರ್ಚು. ನಾವು ಏಳೆಂಟು ಜನ ಹುಡುಗರು ನಮ್ಮ ಮನೆಯ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು. ನಮ್ಮ ಪ್ರಿನ್ಸಿಪಾಲರೆ ನಮ್ಮಲ್ಲಿ ಎಣ್ಣೆ ಸವರುಕೊಳ್ಳುವುದಕ್ಕೂ ಬರದ ಅಂಡರ್ ಗ್ರಾಜುಯೇಟ್‌ಗಳಿಗೆ ಎಣ್ಣೆ ಹಚ್ಚುವರು. ಉಪಾಧ್ಯಾಯರು ವಿದ್ಯಾರ್ಥಿಗಳು ಎಂದರೆ ಹಾಗಿರಬೇಕು. ಏನು ಮೈತ್ರಿ! ಏನು ಸೇವೆ? ಎಷ್ಟು ಕರುಣೆ! ಈಗ ಎಲ್ಲೆಲ್ಲಿಯೂ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ಸಂಬಂಧ ಹೋಯಿತು ಎಂದು ಕೂಗಿಕೊಳ್ಳುತ್ತಿದ್ದಾರೆ. ನಮ್ಮ ಮನೆಯ ವಿಶ್ವವಿದ್ಯಾನಿಲಯವನ್ನು ಉದಾಹರಣೆಯಾಗಿಟ್ಟುಕೊಂಡರೆ ನಮ್ಮ ಈ ಸನಾತನ, ಪುರಾತನ ಪವಿತ್ರ ಪುಣ್ಯ ಭೂಮಿಯಾದ ಭಾರತ ವರ್ಷದ ಮಾತಂತಿರಲಿ, ಸಮಗ್ರ ಜಗತ್ತಿಗೇ ಕ್ಷೇಮ ಉಂಟಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ! ನಗಬೇಡಿ ಸ್ವಾಮಿ, ನಗಬೇಡಿ! ನನ್ನ ಮಾತಿನ ಅಂತರರ್ಥವನ್ನು ಗ್ರಹಿಸಿ ನೋಡಿ. ಆಗ ವಿಷಯ ಗೊತ್ತಾಗುತ್ತದೆ. ಹುಡುಗರ ಜೊತೆಗೆ ದೊಡ್ಡವರು; ಅಪ್ಪಯ್ಯ ಚಿಕ್ಕಪ್ಪಯ್ಯ ಸಣ್ಣ ಚಿಕ್ಕಯ್ಯ ದೊಡ್ಡ ಕಕ್ಕಯ್ಯ ಅಣ್ಣಯ್ಯ ಅಜ್ಜಯ್ಯ ಇತ್ಯಾದಿ! ಎರಡು ಆಳುಗಳಿಗೆ ಎಣ್ಣೆ ತಿಕ್ಕೀ ತಿಕ್ಕೀ ಸಾಕಾಗಿ ಹೋಗಬೇಕು. ಎಷ್ಟೋ ಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿದ್ದಾರೆ ಅಂದರೆ! ಇನ್ನೆರಡು ಆಳುಗಳು ನೀರು ಸರಿ ಮಾಡುವುದು.

ಹಾಗೆಂದರೆ ಏನು ಅನ್ನುವಿರೋ? ಹೇಳುತ್ತೇನೆ! ಲಾಲಿಸಬೇಕು! ಎರಡು ಹಂಡೆಗಳಲ್ಲಿ ನೀರು ಕುದಿಯುವುದು ಒತ್ತಟ್ಟಿಗಿರಲಿ, ಅದು ನೀರಿನ ಉಗ್ರಾಣವಾಗಿತ್ತು. ಅಲ್ಲಿಂದ ನೀರನ್ನು ತೆಗೆದು, ಬೇರೆ ಕಡಾಯಿಗಳಿಗೆ ಹಾಕಿ, ತಣ್ಣೀರು ಬೆರೆಸಿ, ಹದಮಾಡುವರು. ನೀರು ಬೆರೆಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ; ಅಲ್ಲದೆ ಒಂದು ದೋಣಿ, ಸುಮಾರು ಹದಿಮೂರು ಅಡಿಗಳಷ್ಟು ಉದ್ದದ್ದು. ಆ ದೋಣಿ ಏಕೆ ಅನ್ನುವಿರೋ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದ ಮೇಲೆ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಒಂದು ಮುಖ್ಯವಾದ ಅಂಗ. ಆ ನೀರು ಬಿಸಿಬಿಸಿಯಾಗಿರುವುದು. ಅದನ್ನು ಬಿಸಿ ನೀರು ಎಂದರೆ ತಪ್ಪಾಗಬಹುದು; ಸುಡು ನೀರು ಎನ್ನುವುದೇ ಉತ್ತಮ; ಮತ್ತು ಸತ್ಯಕ್ಕೆ ಹೆಚ್ಚು ಸಮೀಪ. ಅಭ್ಯಂಜನದಲ್ಲಿ ಬಿಸಿ ನೀರನ್ನು ಉಪಯೋಗಿಸುವುದೇ ಇಲ್ಲ; ಎಲ್ಲ ಸುಡು ನೀರೇ! ಎಷ್ಟೋ ಸಾರಿ ಹುಡುಗರನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋಗಿ ಅದರಲ್ಲಿ ಅದ್ದಿದಾಗ

ಅವರು ಕಿಟ್ಟನೆ ಕಿರಚಿಕೊಂಡು, ಕೆಳಗೆ ಹಾರಿ, ಕಲ್ಲಿನ ಮೇಲೆ ಬಿದ್ದು ಗಾಯವಾಗಿದೆ ಅಂದರೆ! ಇಷ್ಟೊಂದು ವಿಧವಿಧವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕುಸಾಕಾಗಿ ಹೋಗುತ್ತದೆ.

ಅತ್ತ ಆಳುಗಳು ಅಭ್ಯಂಜನದ ನಾಟಕಕ್ಕೆ ಬೇಕಾದ ಸಲಕರಣೆಗಳನ್ನು ಸಿದ್ಧ ಮಾಡುತ್ತಿರಲು, ಇತ್ತ ಪಾತ್ರಧಾರರು ಎಣ್ಣೆ ಹಚ್ಚಿಕೊಳ್ಳುತ್ತಿರುವುದೊಂದು ಸುಮನೋಹರ ದೃಶ್ಯ. ಮನೆಯಲ್ಲಲ್ಲ, ಹರಳೆಣ್ಣೆಯಲ್ಲಿ ಅದನ್ನು ಬರೆದರೂ ಆ ವರ್ಣನೆ ಸರಿಯಾಗಿ ಅವಿರ್ಭವಿಸುವುದು ಅಸಾಧ್ಯ. ಪ್ರಿನ್ಸಿಪಾಲರಾದ ನಮ್ಮ ಐಗಳು ಕಿರಿಯರಿಗೆ ಎಣ್ಣೆ ಹಚ್ಚಿಹಚ್ಚಿ ಬಿಡುತ್ತಿರುವರು. ಅದೊಂದು ದೊಡ್ಡ ಗೋಳು. ತಿಮ್ಮು ಎಣ್ಣೆ ಹಚ್ಚಿಸುಕೊಳ್ಳುತ್ತಾ ಕಿಟ್ಟನೆ ಕೂಗಿಕೊಂಡನು. ಏಕೆ ಎಂದರೆ, ಮೊನ್ನೆ ಮಾವಿನಮರದಿಂದ ಕೆಳಗೆ ಹಾರಿದಾಗ ಬಿದ್ದು ಗಾಯವಾಗಿದ್ದನ್ನು ಯಾರಿಗೂ ಹೇಳದೆ ಮುಚ್ಚಿಟ್ಟಿದ್ದನು. ಐಗಳು ಅದನ್ನು ಅರಿಯದೆ ಕುದುರೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೇ ತಿಕ್ಕಿದರು. ಹಾಗೆ ಮಾಡುವಾಗ ಕೀತುಹೋದ ಗಾಯ ಹಸಿದುಕೊಂಡು ಇದ್ದಕ್ಕಿದ್ದಂತೆ ದೃಗ್ಗೋಚರವಾಯ್ತು. ಅಂತೂ ಗಾಯದ ನೋವಿಗೋ, ಗುಟ್ಟು ಬಯಲಾಯಿತಲ್ಲಾ ಎಂದೋ ಗೋಳೋ ಎಂದು ಅಳುತ್ತಿದ್ದಾನೆ. ಏನು? ತಲೆಗೆ ಹಾಕಿದ ಎಣ್ಣೆ ಶಿವನ ತಲೆಯ ಜಡೆಗಳಿಂದ ಹೊರಟ ಶ್ರೀಮದ್ ಗಂಗೆಯಂತೆ. ಮೆಲ್ಲನೆ ಕೇಶರಾಶಿಗಳಿಂದ ಉಚ್ಚಳಿಸಿ, ಲಲಾಟದ ಮಾರ್ಗವಾಗಿ ಭ್ರೂಮಧ್ಯೆ ಇಳಿದು ಕಮಲನಯನಗಳನ್ನು ಪ್ರವೇಶಿಸಿ ಬಿಟ್ಟಿತ್ತು! ನೆಗೆನೆಗೆದು ಬಿದ್ದು ಬಿದ್ದು ಕಿರಚಿ ಕೊಳ್ಳುತ್ತಿದ್ದಾನೆ. ಸರಿ; ಐಗಳು ಓಬುಗೆ ಎಣ್ಣೆ ಹಚ್ಚುವುದನ್ನು ನಿಲ್ಲಿಸಿ ವಾಸುವಿನ ''ರಿಲೀಫ್ ವರ್ಕ್''ಗೆ ಹೊರಟರು. ಬಟ್ಟೆಯಿಂದ ಕಣ್ಣು ಜಜ್ಜಿ ಹೋಗುವಂತೆ ಒರಸಿದ್ದಾಯಿತು. ಆದರೆ ಆ ಗಲಾಟೆಯಲ್ಲಿ ತಲೆಯಲ್ಲಿದ್ದ ಕಜ್ಜಿಯ ಜ್ಞಾಪಕವೇ ಅವರಿಗಾಗಲಿಲ್ಲ. ಅದನ್ನು ಎಡಗೈಯಿಂದ ಬಲವಾಗಿ ಅದುಮಿದ್ದರಿಂದ ಅವನು ಮತ್ತೂ ಕುಣಿದು ಕೂಗತೊಡಗಿದನು. ಅಲ್ಲಿ ನೋಡಿ! ಅಲ್ಲಿ ನೋಡಿ! ಮಾನು ಎಣ್ಣೆಯ ಕುಡಿಕೆಯನ್ನೇ ಮಗುಚಿ ಹಾಕಿದನು! ಅವನಿಗೂ ಭೂದೇವಿಗೂ ಸ್ಪರ್ಧೆ ತೊಡಗಿದೆ. ಭೂದೇವಿ ತೈಲವನ್ನು ಪಾನ ಮಾಡಲು ಯತ್ನಿಸುತ್ತಿದ್ದಾಳೆ; ಮಾನು ಆದಷ್ಟನ್ನು ಬಳಿದು ಬಳಿದು ಮೈಗೆ ಬಳಿಯುತ್ತಿದ್ದಾನೆ. ಆ ಭರದಲ್ಲಿ ಮಣ್ಣೆಲ್ಲಾ ಮೈಗೂಡಿ ಹೋಗಿದೆ! ಈ ಅನಾಹುತವನ್ನು ನೋಡಿದ ಚಿಕ್ಕಯ್ಯರೇಗಿ ಎದ್ದು ಮಾನುಗೆ 'ದಿಡ್' ಎಂದು ಒಂದು ಗುದ್ದು ಕೊಟ್ಟರು. ಅವನು ಮೌನವಾಗಿ ರೋದಿಸುತ್ತ ಮೂಲೆ ಸೇರಿ ಪೂರಕೆಯಾಗಿ ಬಿಟ್ಟನು. ಹುಡುಗರ ಗುಂಪಿನಲ್ಲಿ ಹೀಗೆ ಘಟನೆಗಳ ಮೇಲೆ ಘಟನೆಗಳು ಪ್ರಾಪ್ತವಾಗುತ್ತಿರಲಾಗಿ ದೊಡ್ಡವರ ಮೈಗೆ ಆಳುಗಳು ಎಣ್ಣೆ ಉಜ್ಜುತ್ತಿದ್ದಾರೆ. ಕೆಲವರು ಗರಡಿಯಲ್ಲಿ ಕಸರತ್ತು ಮಾಡುವರಂತೆ ''ಹುಂ ಉಸ್, ಹುಂ ಉಸ್'' ಎನ್ನುತ್ತಿದ್ದಾರೆ. ಅಜ್ಜಯ್ಯ ದೂರದಲ್ಲಿ ಕುಳಿತು ಎಣ್ಣೆ ಉಜ್ಜಿಸಿಕೊಳ್ಳುತ್ತಾರೆ. ಅವರ ಮೈಯೆಲ್ಲ ತೈಲಮಯ. ಆಳು ತಲೆಗೆ ಎಣ್ಣೆ ಹಾಕಿ ಪಟ್ ಪಟ್ ಎಂದು ಮದ್ದಲೆ ಬಡಿಯುವಂತೆ ಬಿಡುವಿಲ್ಲದೆ ಬಡಿಯುತ್ತಿದ್ದಾನೆ. ಆ ಏಟಿಗೆ ಅಭ್ಯಾಸವಿಲ್ಲದವರಾಗಿದ್ದರೆ ಮೆದುಳು ಕದಡಿ ಹೋಗುತ್ತಿತ್ತು. ಆದರೆ ಅಜ್ಜಯ್ಯ ಅಚಲದಂತೆ ಧೀರವಾಗಿ ಕುಳಿತಿದ್ದಾರೆ.

ಈ ಮಧ್ಯೆ ಅವರು ಎಣ್ಣೆ ಹಚ್ಚಿಕೊಳ್ಳುವುದನ್ನು ಪ್ರಾರಂಭಿಸುವಾಗ ಮಾಡುವ ಕರ್ಮಕ್ರಿಯೆಗಳನ್ನು ಹೇಳಿದರೆ ಅಪ್ರಕೃತವಾಗುವುದು. ಅಲ್ಲಿ ನೋಡಿ! ಅವರ ಮುಂದೆ ನೆಲದ ಮೇಲೆ ಬೆರಳಿನಿಂದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ. ಅವು ಅಶ್ವತ್ಥಾಮ, ಹನುಮಂತ ಮೊದಲಾದ ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕ ತೈಲ ಬಿಂದುಗಳು. ಅದಾದ ಮೇಲೆ ಅವರು ಏನೇನೋ ಬಾಯಲ್ಲಿ ಪೂರ್ತಿಯಾಗಿ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬಟ್ಟುಗಳನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಉಜ್ಜಲು ಅಪ್ಪಣೆ ಕೊಡುವರು. ಈ ಪ್ರಾರಂಭೋತ್ಸವವನ್ನು ನಾವು ಭಯ ಭಕ್ತಿಗಳಿಂದ ದೇವರಿಗೆ ಮಾಡುವ ಮಂಗಳಾರತಿಯನ್ನು ನೋಡುವಂತೆ ನೋಡುತ್ತಿದ್ದೆವು.

ಇಷ್ಟು ಹೊತ್ತಿಗೆ ದೊಡ್ಡ ಬೋಗುಣಿಯಲ್ಲಿ ಪಾನಕ ಸಿದ್ಧವಾಗುವುದು. ಎಣ್ಣೆ ಹಚ್ಚಿ ಆಯಾಸ ಪಟ್ಟವರಿಗಲ್ಲ. ಹಚ್ಚಿಸಿಕೊಂಡು ಆಯಾಸಪಟ್ಟವರಿಗೆ. ಅಲ್ಲದೆ ಅಭ್ಯಂಜನದ ನಡುವೆ ಬಿಸಿ ನೀರು ಮಿಂದು ಶಕ್ತಿಗುಂದಿದವರಿಗೂ ಪಾನಕ ಕೊಟ್ಟು ಪುನ: ಸಶೇಷವಾದ ಸ್ನಾನವನ್ನು ಪೂರ್ತಿರಯಾಗಿ ಪೂರೈಸಲು ಶಕ್ತಿ ಬರುವಂತೆ ಮಾಡುವುದು ರೂಢಿಯಾಗಿತ್ತು. ಅಷ್ಟು ಬಿಸಿ ಬಿಸಿಯಾದ ಸುಡುನೀರನ್ನು ಹೇಗೆ ಮೀಯುತ್ತಿದ್ದೆವೋ ನಾನರಿಯೆ. ಈಗ ಅದನ್ನು ನೆನೆದರೆ ಸಾಕು ನನಗೆ ಬೆವರು ಬರುವ ಹಾಗೆ ಆಗುತ್ತದೆ! ಆ ಬಿಸಿ ನೀರಿನ ದೋಣಿಯಲ್ಲಿ ಅರ್ಧಗಂಟೆ ಮಲಗಿ, ಅಲ್ಲಿಂದ ಕೆಳಗೆ ಇಳಿಯಲು ಶಕ್ತಿ ಸಾಲದೆ ಇತರರ ಸಹಾಯದಿಂದ ಕೆಳಗಿಳಿದರೆ ಕೂಡಲೆ ಕಡಾಯಿಯಲ್ಲಿ ಸಿದ್ಧವಾಗಿದ್ದ ಸುಡುನೀರನ್ನು ತಲೆಯ ಮೇಲೆ ರಪ್ ರಪ್ ಎಂದು ಹಾಕುವರು. ಶಿಥಿಲವಾಗಿದ್ದ ಜೀವ ಮತ್ತೂ ಶಿಥಿಲವಾಗಿ ನಿಲ್ಲಲಾರದೆ ಕೊಳದ ಕಲ್ಲಿನ ಮೇಲೆ ಕುಳಿತರೆ, ಒಬ್ಬರಲ್ಲ ಇಬ್ಬರು ಸೀಗೆಯಿಂದ ಮೈಯುಜ್ಜಲು ತೊಡಗುವರು. ಅವರ ತಿಕ್ಕಾಟ, ಎಳೆದಾಟದಲ್ಲಿ ಮೂರ್ಛೆ ಬರುವಷ್ಟಾಗುವುದು. ಆಮೇಲೆ ತಲೆಯಲ್ಲಿದ್ದ ಹರಳೆಣ್ಣೆ ಸಂಪೂರ್ಣವಾಗಿ ಹೋಗುವಂತೆ ತಲೆಯುಜ್ಜುವರು. ಆ ಸಮಯದಲ್ಲಿ ಅಳದೆ ಇರುವ ಹುಡುಗರೇ ಇಲ್ಲ. ಕಣ್ಣನ್ನು ಎಷ್ಟು ಬಲವಾಗಿ ಮುಚ್ಚಿದರೂ ಸೀಗೆಯ ನೀರು ಹೇಗಾದರೂ ಮಾಡಿ ಒಳಗೆ ನುಗ್ಗಿಯೇ ನುಗ್ಗುವುದು. ಸ್ನಾನ ಮುಗಿಯುವಷ್ಟರಲ್ಲಿಮೈಯೆಲ್ಲ ಹಣ್ಣಾಗಿ, ಹಣ್ಣಾಗಿ, ಕಣ್ಣಿನಂತೆಯೇ ಕೆಂಪಾಗಿ, ನಿಲ್ಲಲಾರದಷ್ಟು ಶಕ್ತಿ ಗುಂದದೆ ಇದ್ದರೆ ಅದು ನಿಜವಾದ ಅಭ್ಯಂಜನ ಅಲ್ಲವೇ ಅಲ್ಲ ಎಂದು ನಮ್ಮವರ ನಂಬುಗೆ. ಸ್ನಾನ ಮುಗಿಯಿತು. ಐಗಳು ಹುಡುಗನನ್ನು ಮೆಲ್ಲನೆ ಕೈ ಹಿಡಿದು ನಡೆಯಿಸಿಕೊಂಡು ಹೋಗಿ ಸಿದ್ಧವಾಗಿದ್ದ ಹಾಸುಗೆಯ ಮೇಲೆ ಮಲಗಿಸುವರು. ಚೆನ್ನಾಗಿ ಬೆವರಲಿ ಎಂದು ಶಾಲು, ಕಂಬಳಿ, ರಗ್ಗು ಎಲ್ಲವನ್ನೂ ಮುಖ ಮುಚ್ಚಿ ಹೊದಿಸುವರು. ಒಳಗೆ ಪ್ರಾಣಿ ಬೆವತೂ ಬೆವತೂ ಹಾಸಿಗೆಯೆಲ್ಲ ತೊಯ್ದು ಹೋಗುತ್ತದೆ. ಹೀಗೆ ಹುಡುಗರನ್ನು ಒಬ್ಬೊಬ್ಬರನ್ನಾಗಿ ಹಣ್ಣು ಹಣ್ಣು ಮಾಡಿ ಹಾಸುಗೆಗೆ ತಳ್ಳಿದ ಮೇಲೆ ದೊಡ್ಡವರ ಸ್ನಾನ ಪ್ರಾರಂಭವಾಗುತ್ತದೆ. ಕಡೆಯಲ್ಲಿ ನಮ್ಮ ಅಜಜಯ್ಯನವರ ಅಭ್ಯಂಜನ. ಎಲ್ಲರಿಗೂ ಹೆದರಿಕೆ!

ಅಜ್ಜಯ್ಯನಿಗೆ ಎಲ್ಲರಿಗಿಂತಲೂ ಹೆಚ್ಚು ಬಿಸಿಯಾದ ನೀರು ಬೇಕು. ಅವರು ಮೀಯುವ ನೀರಿಗೆ ನಾವು ಕೈಯಿಟ್ಟರೆ ಥಕ್ಕನೆ ಹೊರಗೆ ಎಳೆದುಕೊಳ್ಳುವಂತಾಗುತ್ತಿತ್ತು. ಅಭ್ಯಂಜನದ ಕಾಲದಲ್ಲಿ ಅವರು ಎರಡು - ಮೂರು ಸಾರಿಯಾದರೂ ಮೂರ್ಛೆ ಹೋಗದೆ ಇರುತ್ತಿರಲಿಲ್ಲ. ಅಷ್ಟೊಂದು ಬಿಸಿಯಾದ ನೀರನ್ನು ಮಿಂದರೆ ಯಾರಿಗೆ ತಾನೆ ಮೂರ್ಛೆ

ಬರುವುದಿಲ್ಲ? — ಅದರಲ್ಲಿಯೂ ಸ್ವಲ್ಪ ವಯಸ್ಸು ಹೋದವರು. ಅವರುದೋಣಿಯಲ್ಲಿ ದೀರ್ಘಕಾಲ ಮಲಗುವರು. ಏಳುವಾಗ ಒಂದು ಲೋಟ ಪಾನಕ ಕುಡಿಯುವರು. ಆಮೇಲೆ ಕೊಳದಲ್ಲಿ ಕುಳಿತು ತಲೆಯ ಮೇಲೆ ಸುಡುನೀರು ಹಾಕಿಕೊಳ್ಳುವರು. ಒಬ್ಬರಲ್ಲ ಇಬ್ಬರು, ಚೆಂಬುಗಳಲ್ಲಿ ಕಡಾಯಿಯಿಂದ ಮೊಗೆ ಮೊಗೆದು ಎಡೆಬಿಡದೆ ನೀರನ್ನು ಎತ್ತರದಿಂದಲೇ ರಭ್ ರಭ್ ಎಂದು ನೆತ್ತಿಗೆ ಹೊಡೆಯುವರು. ಈ ದ್ವಿತೀಯ ಕರ್ಮವಾದ ಮೇಲೆ ಒಂದು ಲೋಟ ಪಾನಕ ಖರ್ಚಾಗುತ್ತಿತ್ತು. ಆಮೇಲೆ ಆಳುಗಳು ಮೈಕೈಗಳನ್ನೂ ತಲೆಯನ್ನೂ ಸೀಗೆಯಿಂದ ಗಸಗಸ ಉಜ್ಜುವರು. ಪುನ: ಸುಡುನೀರು ಜಲಪಾತದಂತೆ ತಲೆಯ ಮೇಲೆ ಬೀಳುತ್ತಿತ್ತು. ಇಷ್ಟು ಹೊತ್ತಿಗೆ ಮೂರ್ಛೆಹೋಗಿ ಕೊಳದ ಕಲ್ಲಿನಮೇಲೆ ಮಲಗಿ ಬಿಡುತ್ತಿದ್ದರು.ಆಗ ಹಾಹಾಕಾರವೆದ್ದು ಜನಗಳು ಹಿಂದೆ ಮುಂದೆ ಓಡಾಟ ಮಾಡುವುದೇ ಕಾರ್ಯದಕ್ಷತೆಯ ಚಿಹ್ನೆ ಎಂದು ತಿಳಿದುಕೊಂಡಂತೆ ತೋರುತ್ತಿತ್ತು. ಒಳಗಿನಿಂದ ಅಜ್ಜಮ್ಮ ಬರುತ್ತಿದ್ದರು. ಕೆಲವರು ಪಾನಕ ಕುಡಿಸುವರು; ಕೆಲವರು ತಣ್ಣೀರನ್ನು ತಲೆಗೆ ತಟ್ಟುವರು; ಕೆಲವರು ಗಾಳಿ ಬೀಸುವರು; ಕೆಲವರು ತೋಟದಾಚೆಯ ಭೂತರಾಯನಿಗೆ ಅಡ್ಡಬಿದ್ದು ಅಜ್ಜಯ್ಯನನ್ನು ಸಂರಕ್ಷಿಸುವಂತೆ ಅಂಗಲಾಚಿ ಬೇಡುವರು. ಅಂತೂ ಸ್ವಲ್ಪ ಹೊತ್ತಿಗೆ ಅಜ್ಜಯ್ಯನ ಮೂರ್ಛೆ ಕೊನೆಗಂಡು 'ಅಮ್ಮಯ್ಯ'! 'ನಾರಾಯಣ' ಮೊದಲಾದ ಶಬ್ದಗಳು ಅವರ ಬಾಯಿಂದ ಹೊರಬಿದ್ದು ಎಲ್ಲರಿಗೂ ಧೈರ್ಯವನ್ನುಂಟು ಮಾಡುತ್ತಿದ್ದುವು ಸರಿ; ಮತ್ತೆ ಜಳಕ! ಮತ್ತೆ ಮೂರ್ಛೆ! ಹೀಗಾಗಿ ಕೊನೆಗೆ ಸ್ನಾನ ಕೊನೆಗಾಣುವುದು. ಅವರಿಗೆ ನೀರೆರೆವವರು ಕೈಗಳನ್ನು ಆಗಾಗ ತಣ್ಣೀರಿನಲ್ಲಿ ಅದ್ದಿ ತಂಪು ಮಾಡಿಕೊಂಡರೂ ಆ ಬಿಸಿನೀರಿನ ತಾಪ ಶಮನವಾಗುತ್ತಿರಲಿಲ್ಲ. ಅಷ್ಟು ಬಿಸಿ ಅವರು ಮೀಯುವ ನೀರು! ಅಜ್ಜಯ್ಯನ ಸ್ನಾನ ಕೊನೆಗಾಣುವಾಗ ಅವರು ಗಂಗೆ - ಯಮುನೆ ಮೊದಲಾದ ಪುಣ್ಯ ನದಿಗಳ ಹೆಸರಿನ ಪಟ್ಟಿಯೊಂದನ್ನು ಗಟ್ಟಿಯಾಗಿ ಉಚ್ಚರಿಸಿ, ನಾಲ್ಕು ದಿಕ್ಕುಗಳಿಗೂ ಕೈಮುಗಿಯುತ್ತಿದ್ದರು. ಇಬ್ಬರು ಎರಡು ಕೈಗಳನ್ನು ಹಿಡಿದು ಹಾಸಿಗೆಗೆ ಕರೆದೊಯ್ಯುತ್ತಿದ್ದರು. ಹೋಗುವಾಗ ಅವರ ಮೈ ಹೊಗೆಯಾಡುವಂತೆ ಕಾಣುತ್ತಿತ್ತು. ಅಲ್ಲಿ ಸಿದ್ಧವಾಗಿದ್ದ ಕಂಬಳಿ ಮೊದಲಾದವುಗಳನ್ನು ಮೈ ತುಂಬಾ ಹೊದೆದುಕೊಂಡು ಮಲಗಿ ಬೆವರಿಸಿಕೊಳ್ಳುತ್ತಿದ್ದರು. ಅವರು ಆ ದಿನ ರಾತ್ರಿ ಊಟ ಮಾಡುತ್ತಿರಲಿಲ್ಲ; ಬರಿಯ ಹಾಲನ್ನೇ ಕುಡಿದು ಮಲಗಿ ಬಿಡುವರು.

ಅವರ ಕಾಲ ಮುಗಿದು ಹೋಯಿತು. ಅವರೊಡನೆ ಆ ಅಭ್ಯಂಜನದ ಮಹೋತ್ಸವವೂ ಮರೆತು ಹೋಯಿತು.

## 15.2.1 ಕಠಿಣ ಶಬ್ದಾರ್ಥ

ಉದ್ವಿಗ್ನ — ಕ್ಷೋಭೆ, ಅಶಾಂತಿ
ನಿರುದ್ವಿಗ್ನ — ಕ್ಷೋಭೆಯಿಲ್ಲದ, ಶಾಂತಿಯುತವಾದ, ಗಡಿಬಿಡಿಯಿಲ್ಲದ
ದ್ರುತಪದ — ತೀವ್ರ ಹೆಜ್ಜೆ, ಓಡಾಟ
ಉದ್ವೇಗ — ತೀವ್ರಗತಿ, ಹಾವಳಿ
ಸಮಾಚ್ಛನ್ನ — ಚೆನ್ನಾಗಿ ಮುಚ್ಚಿದ
ಬೇಜಾರು — ಬೇಸರಿಕೆ
ಅನಾಗರಿಕ — ಅಸಂಸ್ಕೃತ, ಸುಸಂಸ್ಕೃತವಲ್ಲದ;
ಮಲೆ — ಪರ್ವತ
ಅನಂತ — ಅಂತ್ಯವಿಲ್ಲದುದು, ಕೊನೆಯಿಲ್ಲದ್ದು
ತೊರೆ — ನದಿ
ತತ್ತ್ವಜ್ಞ — ತತ್ತ್ವವನ್ನು ಅರಿತವ
ಔದಾಸೀನ್ಯ — ಉದಾಸೀನ ಭಾವನೆ
ನಿಷ್ಕಾಮ — ಅಪೇಕ್ಷೆಯಿಲ್ಲದ, ಕಾಮರಹಿತ;
ಕ್ಷುದ್ರ — ಚಿಕ್ಕ ಸಣ್ಣ
ಉದ್ವೇಗ — ಮನಸ್ಸಿನ ಏರಿಳಿತ, ಹೊಯ್ದಾಟ
ಜಕ್ಕಿಣಿ (ತ್ಭ) — ಯಕ್ಷಿಣಿ (ಸಂ.)
ಜಮಾಬಂದಿ — ಕಂದಾಯ ಗೊತ್ತುಪಡಿಸುವ ಪರಿವೀಕ್ಷಣೆ
ಅಭ್ಯಂಜನ — ದೇಹದ ಪ್ರತಿಯೊಂದು ಅಂಗಕ್ಕೂ ಎಣ್ಣೆ ಹಚ್ಚಿ ಉಜ್ಜಿಸಿಕೊಂಡು ಸ್ನಾನ ಮಾಡುವುದು.
ಐಗಳು — ಶಿಕ್ಷಕರು
ಕುಜಾ — ಶಿಕ್ಷೆ
ಆಪೋಶನ — ಕುಡಿ
ಕಳ್ಳು — ಸೆರೆ, ಒಂದು ಬಗೆಯ ಮಾದಕ ಪೇಯ
ಅಮೃತತ್ವ — ಸಾವಿಲ್ಲದ ಸ್ಥಿತಿ
ತೀರಿಕೊಳ್ಳು — ಸಾಯು
ಮಾಮೂಲು — ಸಂಪ್ರದಾಯ
ಹೂಳು — ಹುಗಿ
ಕತ್ತಿದೋಟಿ — ತುದಿಗೆ ಕತ್ತಿಯನ್ನು ಕಟ್ಟಿದ ದೊಡ್ಡ ಬಿದಿರು
ಕುಂಟೆ — ಬೊಡ್ಡಿ, ಕೊರಡು
ಬಡಬಾಗ್ನಿ — ಭೂಮಿಯ ಒಳಗೆ ಹುದುಗಿದ ಬೆಂಕಿ
ಹರಳೆಣ್ಣೆ — ಔಡಲೆಣ್ಣೆ

| | |
|---|---|
| ಅಂತರಾರ್ಥ | — ಒಳತಿರುಳು |
| ಮಾಲೀಸು | — ಮೈತಿಕ್ಕುವುದು |
| ದೃಗ್ಗೋಚರವಾಗು | — ಕಣ್ಣಿಗೆ ಕಾಣು |
| ಲಲಾಟ | — ಹಣೆ |
| ಭ್ರೂಮಧ್ಯ | — ಹುಬ್ಬಿನ ನಡುವೆ |
| ಕಮಲನಯನ | — ಕಮಲದಂತಹ ಕಣ್ಣು |
| ರೋದಿಸು | — ಅಳು |
| ಪೊರಕೆ | — ಕಸಬರಿಗೆ |
| ಅಚಲ | — ಚಲಿಸದಿರುವುದು, ಪರ್ವತ |
| ಅಪ್ರಕೃತ | — ಪ್ರಸ್ತುತವಲ್ಲದ್ದು, ಸಂಬಂಧವಿಲ್ಲದ್ದು |
| ಮಟಗುಡು | — ವಟಗುಡು |
| ಸಶೇಷ | — ಉಳಿದ |
| ಮೊಗೆ | — ನೀರು ತುಂಬು |
| ಶಮನವಾಗು | — ತಣ್ಣನಾಗು, ಆರು |
| ತಿಕ್ಕಿ ತಿಕ್ಕಿ | — ಪುನರುಕ್ತಿ ಮತ್ತು ದೀರ್ಘಗಳೆರಡೂ ಸೇರಿ ಕ್ರಿಯೆ ಬಹಳ ಸಲ ನಡೆಯಿತು ಎಂಬ ಅರ್ಥವನ್ನು ಸೂಚಿಸುತ್ತವೆ. |

## 15.2.2 ಕವಿ ಕೃತಿ ಪರಿಚಯ

''ಅಜ್ಜಯ್ಯನ ಅಭ್ಯಂಜನ'' ಎಂಬುದು ರಾಷ್ಟ್ರಕವಿ ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಎಂಬ ಗ್ರಂಥದಿಂದ ಆಯ್ದುಕೊಂಡದ್ದು. ಕುವೆಂಪು ಎಂಬುದು ಕಾವ್ಯನಾಮ. ಅವರ ಮೂಲ ಹೆಸರು ಕುಪ್ಪಳ್ಳಿ ವೆಂಕಟಪ್ಪನವರ ಮಗ ಪುಟ್ಟಪ್ಪ. ಈ ಮೂರು ಹೆಸರುಗಳ ಆದಿಯ ಅಕ್ಷರಗಳು ಕೂಡಿ ಕುವೆಂಪು ಎಂಬುದು ಸೃಜನವಾಗಿದೆ. ಕುವೆಂಪು ಅವರ ''ಶ್ರೀ ರಾಮಾಯಣ ದರ್ಶನಂ'' ಕಾವ್ಯ ಸಮಕಾಲೀನ ಭಾರತದ ಅತ್ಯಂತ ಶ್ರೇಷ್ಠವಾದ ಕೃತಿಗಳಲ್ಲಿ ಒಂದು. ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪ್ರಪ್ರಥಮವಾಗಿ ಪಡೆದ ಹೆಗ್ಗಳಿಕೆ ಆ ಗ್ರಂಥಕ್ಕಿದೆ. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕುವೆಂಪು ಅವರು ಕನ್ನಡದ ಸ್ಥಾನಮಾನಗಳನ್ನು ಹೆಚ್ಚಿಸಿದರು. ''ಶ್ರೀ ರಾಮಾಯಣದರ್ಶನಂ'' ಮಹಾಕಾವ್ಯವಲ್ಲದೆ, ಭಾವಗೀತೆ, ಕತೆ, ಕಾದಂಬರಿ, ವಿಚಾರ ಸಾಹಿತ್ಯ ವಿಮರ್ಶನ ಸಾಹಿತ್ಯ ಲಘು ಪ್ರಬಂಧ, ಮುಂತಾದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ನಿರ್ಮಿಸಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮೈಲುಗಲ್ಲುಗಳನ್ನು ನೆಟ್ಟಿರುವರು.

''ಅಜ್ಜಯ್ಯನ ಅಭ್ಯಂಜನ'' ಒಂದು ಲಘು ಪ್ರಬಂಧ. ಇಂತಹ ಪ್ರಬಂಧವನ್ನು 'ಲಲಿತ ಪ್ರಬಂಧ'ವೆಂಬುದಾಗಿ ಕರೆಯುವುದೂ ಉಂಟು. ಇದು ಇಂಗ್ಲೀಷ್ ಸಾಹಿತ್ಯದ 'ಎಸ್ಸೆ' ಎಂಬ ಪ್ರಕಾರವನ್ನು ಹೋಲುತ್ತದೆ. ಈ ಪ್ರಬಂಧದಲ್ಲಿ ಹರಟೆ, ಹಾಸ್ಯ ಹೊನಲಾಗಿ ಹರಿದಿದೆ. ಮಲೆನಾಡಿನ ಸಾಂಪ್ರದಾಯಿಕ ಕುಟುಂಬಗಳ ಸಜೀವ ಚಿತ್ರ ಇಲ್ಲಿ ಮೂಡಿ ಬಂದಿದೆ. ಅಜ್ಜಯ್ಯನ ಅದ್ಭುತ ಚಿತ್ರ ಎಲ್ಲರ ಮನವನ್ನು ಸೆಳೆಯುತ್ತದೆ. ಮಾತು ಮಾತಿಗೆ ಚಿಮ್ಮುತ್ತಿರುವ ಹಾಸ್ಯ ನಮ್ಮನ್ನು ನಗೆಗಡಲಲ್ಲಿ ತೇಲಿಸುತ್ತದೆ. ಅಲ್ಲಲ್ಲಿ ಬರುತ್ತಿರುವ ಸಮಾಜ ವಿಮರ್ಶೆಯ ವ್ಯಂಜಕ ನುಡಿಗಳು ಮಾರ್ಮಿಕವಾಗಿವೆ.

### ಅಭ್ಯಾಸ - 1

(1) ಮಲೆನಾಡಿನ ಜೀವನವನ್ನು ನಿರುದ್ವಿಗ್ನ ಎಂದು ಏಕೆ ಕರೆಯಬಹುದು?

..............................................................................................................
..............................................................................................................
..............................................................................................................
..............................................................................................................
..............................................................................................................
..............................................................................................................

(2) ಮಲೆನಾಡಿನ ವನ್ಯ ಸೌಂದರ್ಯವನ್ನು ನಾಲ್ಕು ಮಾತುಗಳಲ್ಲಿ ವರ್ಣಿಸಿ.

..............................................................................................................
..............................................................................................................
..............................................................................................................
..............................................................................................................
..............................................................................................................

(3) ಮಲೆನಾಡಿನ ಜನತೆಯ ನಿತ್ಯ ಜೀವನದಲ್ಲಿ ಕಂಡುಬರುವ ಚಿಕ್ಕ ಚಿಕ್ಕ ಉದ್ವೇಗಗಳಾವುವು?

..............................................................................................................

..............................................................................................................

..............................................................................................................

..............................................................................................................

..............................................................................................................

(4) ಮಲೆನಾಡಿನ ಜನ ಹೆಚ್ಚು ಚಟುವಟಿಕೆಯಿಂದಿರುವ ಸನ್ನಿವೇಶಗಳಾವುವು?

..............................................................................................................

..............................................................................................................

..............................................................................................................

(5) ಮಲೆನಾಡಿನ ಜೀವನದಲ್ಲಿ ಉತ್ಕ್ರಾಂತಿಗಳು ಉಂಟೆ?

..............................................................................................................

..............................................................................................................

..............................................................................................................

..............................................................................................................

(6) ಶಾಲೆಯ ಮೇಷ್ಟ್ರು ಮನೆಯಲ್ಲಿ ಕೂಲಿಯಾಳುಗಳು ಹೇಗೆ?

..............................................................................................................

..............................................................................................................

..............................................................................................................

..............................................................................................................

(7) ಭಾನುವಾರದ ರಜಾ, ಅಜ್ಜಯ್ಯನ ಸಜಾ ಹೇಗೆ?

..............................................................................................................

..............................................................................................................

..............................................................................................................

..............................................................................................................

(8) ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠವೆಂಬ ಧ್ಯೇಯೋಕ್ತಿ ಯಾರದು? ಏಕೆ?

..............................................................................................................

..............................................................................................................

..............................................................................................................

..............................................................................................................

(9) ಅಭ್ಯಂಜನದಿಂದ ಸ್ವರ್ಗಪ್ರಾಪ್ತಿ ಎಂಬ ಅಜ್ಜಯ್ಯನವರ ಶ್ರದ್ಧೆಯ ವಿಡಂಬನೆ ಹೇಗೆ ಆಗಿದೆ?

..............................................................................................................

..............................................................................................................

..............................................................................................................

..............................................................................................................

(10) "ಯಾರಿಗೋ ಸಂಬಳ ಕೊಡಬೇಕೆಂದು ಈ ಇಲಾಖೆ ನಿರ್ಮಿತವಾಗಿಲ್ಲ" ಇಲ್ಲಿಯ ವಿಡಂಬನೆಯೇನು?

..............................................................................................................

..............................................................................................................

..............................................................................................................

..............................................................................................................

(11) ಅಭ್ಯಂಜನದ ದಿನ ಬಚ್ಚಲು ಮನೆಯ ಒಲೆ ಹೇಗೆ ಕಾಣುತ್ತದೆ?

..........................................................................................

..........................................................................................

..........................................................................................

..........................................................................................

..........................................................................................

(12) ಅಭ್ಯಂಜನದ ಪ್ರಮುಖ ಘಟ್ಟಗಳಾವುವು?.

..........................................................................................

..........................................................................................

..........................................................................................

..........................................................................................

(13) ಮಕ್ಕಳ ಅಭ್ಯಂಜನದಲ್ಲಿ ಬಂದ ಒಂದೆರಡು ಸಾಮಾಜಿಕ ವಿಡಂಬನೆಗಳನ್ನು ವಿವರಿಸಿರಿ.

..........................................................................................

..........................................................................................

..........................................................................................

..........................................................................................

..........................................................................................

(14) ಅಜ್ಜಯ್ಯನ ಅಭ್ಯಂಜನದಲ್ಲಿ ಬಂದ ಒಂದೆರಡು ಸಾಮಾಜಿಕ ವಿಡಂಬನೆಗಳನ್ನು ವಿವರಿಸಿರಿ.

..........................................................................................

..........................................................................................

..........................................................................................

..........................................................................................

..........................................................................................

..........................................................................................

## ಅಭ್ಯಾಸ - 2

**ಬಿಟ್ಟ ಪದಗಳನ್ನು ತುಂಬಿರಿ.**

1. ಇಂತಹ ಶಾಂತಿ ಪ್ರಪಂಚದಲ್ಲಿಯೂ ........................ ಕಾಲಗಳಿವೆ.
2. ಮಲೆನಾಡಿನಲ್ಲಿ ಅಭ್ಯಂಜನವೆಂದರೆ ............................
3. ನಮಗೆ ಅವರು ಮೇಷ್ಟರಾದರೂ ನಮ್ಮ ಹಿರಿಯರಿಗೆ ಅವರು ............................
4. ನಮಗೆ ಭಾನುವಾರ ರಜಾ; ಜೊತೆಗೆ ............................
5. ಒಂದಿಷ್ಟು ಅಭ್ಯಂಜನವನ್ನು ಕೊಡಲಾರದ ದೇವರು ............................ ಕೊಡಬಲ್ಲನೇ
6. ಎಣ್ಣೆ ಹಚ್ಚಿ ಆಯಾಸ ಪಟ್ಟವರಿಗಲ್ಲ; ............................
7. ಜನಗಳು ಹಿಂದೆ ಮುಂದೆ ಓಡಾಟ ಮಾಡುವುದೇ ............................ ಚಿಹ್ನೆ ಎಂದು ತಿಳಿದುಕೊಂಡಂತೆ ತೋರುತ್ತಿತ್ತು.

## 15.3 ಸಾರಾಂಶ

ಲಲಿತ ಪ್ರಬಂಧವೆಂಬ ಈ ಅಂಶದಲ್ಲಿ ''ಅಜ್ಜಯ್ಯನ ಅಭ್ಯಂಜನ''ವೆಂಬ ಪ್ರಬಂಧವನ್ನು ಓದಿದಿರಿ. ಮಲೆನಾಡಿನ ಜೀವನದ ಒಂದು ಮುಖದ ಚಿತ್ರಣವನ್ನು ಕುವೆಂಪು ಅವರು ಮಾರ್ಮಿಕವಾಗಿ ಮಾಡಿದ್ದಾರೆ. ಅಲ್ಲದೆ ಆ ಪ್ರದೇಶದ ಭಾಷೆಯ ಸೊಗಡನ್ನು ತೋರಿಸಿದ್ದಾರೆ. ಕುವೆಂಪು ಅವರು ಮೂಲತ: ಕವಿಯಾದುದರಿಂದ ಜನಜೀವನವನ್ನು ನೋಡುವಾಗಲೂ ಒಂದು ವೈಶಿಷ್ಟ್ಯದ ದೃಷ್ಟಿಕೋನವನ್ನು ತೋರಿದ್ದಾರೆ. ಅದರೊಡನೆ ಆಧುನಿಕ ಸಮಾಜದ ನೀರಸತೆಯನ್ನು ಉದ್ವಿಗ್ನತೆಯನ್ನು ತರಾತುರಿಯನ್ನು ಮಾರ್ಮಿಕವಾಗಿ ಟೀಕಿಸಿದ್ದಾರೆ. ವಯಸ್ಸಿನ ಭೇದವಿಲ್ಲದೆ ಎಣ್ಣೆ ಮಾರ್ಜನ ನಡೆಯುತ್ತದೆ. ಮರ ಹತ್ತುವಾಗ ಆದ ಗಾಯ ಬಯಲಾಗುತ್ತದೆ. ಅಂತೂ ಅಭ್ಯಂಜನ ಬರಿಯಕ್ರಿಯೆಯ ವರ್ಣನೆಯಷ್ಟೇ ಅಲ್ಲ, ಸಂಕೀರ್ಣ ಭಾವಗಳ ಮಿಶ್ರಣವಾಗಿದೆ.

# ಅಭ್ಯಾಸಗಳಿಗೆ ಉತ್ತರಗಳು

ಅಭ್ಯಾಸ - 1

(1) ಮಲೆನಾಡಿನಲ್ಲಿ ನಗರದಲ್ಲಿರುವಂತೆ ಜನತೆಯ ತೀವ್ರಗತಿಯ ಸಂಚಾರವಿಲ್ಲ. ಮೋಟಾರು ಮೊದಲಾದ ವಾಹನಗಳ ಗಡಿಬಿಡಿಯಿಲ್ಲ. ಸಿನಿಮಾ ನಾಟಕಗಳ ಗದ್ದಲವಿಲ್ಲ. ವೃತ್ತಪತ್ರಿಕೆಗಳ ಕ್ಷೋಭೆಯಿಲ್ಲ. ಉಪನ್ಯಾಸಗಳ ಹಾವಳಿಯಿಲ್ಲ. ಮಲೆನಾಡಿನಲ್ಲಿ ಎಲ್ಲೆಲ್ಲಿಯೂ ನೆಲೆಸಿರುವುದು ಶಾಂತಿ. ಅಲ್ಲಿ ಸಂಸ್ಕೃತಿ ವನ್ಯವಾದರೂ ಅನಾಗರಿಕವಲ್ಲ. ಹೀಗೆ ಮಲೆನಾಡಿನಲ್ಲಿ ಜೀವನ ನಿರುದ್ವಿಗ್ನವಾಗಿದೆ.

(2) ಮಲೆನಾಡಿನಲ್ಲಿ ಸುತ್ತು ನೋಡಿದರೆ ಮಾಲೆ ಮಾಲೆಯಾದ ಮಲೆಗಳ ಸಾಲುಗಳು, ದಟ್ಟವಾದ ಕಾಡುಗಳು. ಎತ್ತ ನೋಡಿದರತ್ತ ಮೌನ. ಆ ಮೌನದೇವತೆಯನ್ನು ಮಲಗಿಸುವ ಹಕ್ಕಿಗಳ ಮಧುರಗಾನ. ಮೇಲೆ ತಲೆಯಲ್ಲಿ ನೋಡಿದರೆ ನೀಲಾಕಾಶ ಅನಂತ, ಅಪಾರ. ಬಿಳಿಯ ಮುಗಿಲಿನ ಕನಸಿನ ಲೋಕ ಮೇಲೆ ಸಂಚರಿಸುತ್ತದೆ. ತೊರೆ, ಝರಿ, ತುಂಬಿ ಹರಿಯುತ್ತಿರುತ್ತದೆ. ಮಲೆನಾಡಿನ ವನ್ಯ ಸೌಂದರ್ಯವಿದು.

(3) ಮಲೆನಾಡಿನ ಜನತೆಯ ನಿತ್ಯ ಜೀವನದಲ್ಲಿ ಕಂಡುಬರುವ ಉದ್ವೇಗಗಳು ಹೀಗಿವೆ: ಬಡವನ ಮನೆಗೆ ಸಾಹುಕಾರ ಒಮ್ಮೆಲೆ ಬಂದು ಆತನನ್ನು ಪೀಡಿಸುವುದು ಅಲ್ಲಿ ಒಂದು ಕ್ಷೋಭೆಯಿದ್ದಂತೆ. ಮಗುವಿಗೆ ಜ್ವರ ಬಂದರೆ ಅದು ಊರ ತುಂಬ ಸುದ್ದಿ. ಕಾಡಿನಲ್ಲಿ ಹುಲಿ ಎತ್ತನ್ನು ತಿಂದರೆ ಅದು ಅಷ್ಟೇ ಸುದ್ದಿ. ಮಳೆಗಾಲಕ್ಕಾಗಿ ನಿತ್ಯೋಪಯೋಗಿ ಸಾಮಾನುಗಳನ್ನು ಸಂಗ್ರಹಿಸುವ ರಭಸ, ಕೋರ್ಟಿನಲ್ಲಿ ಬಿದ್ದ ಕೇಸು, ಇತ್ಯಾದಿ ಘಟನೆಗಳು ಉದ್ವೇಗಕ್ಕೆ ಕಾರಣವಾಗಬಲ್ಲುವು.

(4) ಜನನ, ಮರಣ, ವಿವಾಹ, ಬೇಟೆ ಮುಂತಾದ ಸಮಯಗಳಲ್ಲಿ ಜನ ಹೆಚ್ಚು ಚಟುವಟಿಕೆಯಿಂದಿರುತ್ತಾರೆ. ಶಾಂತ ಜೀವನದ ಕ್ರಾಂತಿ ಸನ್ನಿವೇಶಗಳಿವು.

(5) ಮಲೆನಾಡಿನಲ್ಲಿ ಪೋಲೀಸರು ಅನ್ಯಾಯವಾಗಿ ಬಡ ಜನರನ್ನು ಪೀಡಿಸುವರು. ನಿರಪರಾಧಿಗಳನ್ನು ಹಿಂಸಿಸಿ ಲಂಚಪಡೆಯುವರು. ಕೇಸು ಹಾಕುವರು. ಇವು ಉತ್ಕ್ರಾಂತಿಯ ಸನ್ನಿವೇಶಗಳು. ಜಮಾ ಬಂದಿಯ ಊಟವೂ ಅಷ್ಟೇ.

(6) ಶಾಲೆಯಲ್ಲಿ ಅ, ಆ, ಇ, ಈ ಕಲಿಸುವ ಐಗಳು ಮಕ್ಕಳ ಯಜಮಾನರ ಕೂಲಿಯಾಳುಗಳು. ಅವರು ಮಕ್ಕಳ ಅಭ್ಯಂಜನ ಮಾಡಿಸಬೇಕು.ಅವರ ಮೈಗೆ ಎಣ್ಣೆ ಹಚ್ಚಬೇಕು. ಚೆನ್ನಾಗಿ ಉಜ್ಜಬೇಕು. ನೀರು ತೋಡಿ ಬೆರಕೆ ಮಾಡಿ ಚೆನ್ನಾಗಿ ಸ್ನಾನ ಮಾಡಿಸಿ ನಡು ನಡುವೆ ಪಾನೀಯ ಕುಡಿಸಿ ಅವರನ್ನು ಮಲಗಿಸಿ ಮೈತುಂಬ ಹೊಚ್ಚಬೇಕು. ಅಜ್ಜಯ್ಯನ ಅಭ್ಯಂಜನವಂತು ಅವರಿಲ್ಲದೆ ನಡೆಯುವಂತಿಲ್ಲ. ನೀರು ಕಾಸಲು ಸೌದ ಹಾಕಬೇಕು. ಕತ ಕತ ಕುದಿಯುವ ಸುಡು ನೀರನ್ನು ಹಂಡೆಯಿಂದ ಪಾತ್ರೆಗೆ ತೋಡಬೇಕು. ಅಜ್ಜನ ಮೈಯನ್ನು ಚೆನ್ನಾಗಿ ಎಣ್ಣೆ ಹಚ್ಚಿ ಉಜ್ಜಬೇಕು. ನಡುನಡುವೆ ಅಜ್ಜಯನವರಿಗೆ ಪಾನೀಯ ಕೊಡಬೇಕು. ಎಣ್ಣೆ ಹಚ್ಚಿ ತಲೆಗೆ ಪಟ ಪಟ ಹೊಡೆದು ಮೈಯುಜ್ಜುವ ರಭಸದಲ್ಲಿ ಅಜ್ಜಯ್ಯನವರು ಮೂರ್ಛೆ ಹೋದರೆ ಅವರಿಗೆ ಶೆ ಶೈತ್ಯೋಪಚಾರ ಹೊಣೆಯೂ ಈ ಮೇಷ್ಟ್ರುಗಳದೇ. ಹೀಗೆ ಮೇಷ್ಟ್ರುಗಳ ಕೆಲಸ ಬಹುಮುಖವಾಗಿದೆ, ವಿಶಾಲವೂ ಆಗಿದೆ.

(7) ಮಕ್ಕಳು ಭಾನುವಾರ ಎಲ್ಲೆಡೆ ತಿರುಗಾಡಿ ಹಣ್ಣುಗಿಣ್ಣು ಕಿತ್ತು, ಮರಗಿರ ಏರಿ, ಕಲ್ಲುಗಿಲ್ಲು ತೂರಿ ಆಡುವ ರಭಸದಲ್ಲಿರುತ್ತಾರೆ. ಆದರೆ ಭಾನುವಾರ ನಡೆಯಲೇ ಬೇಕಾದ ಅಭ್ಯಂಜನ ಮಹಾಕಾರ್ಯ ಅವರೆಲ್ಲರನ್ನು ಮನೆಬಿಟ್ಟು ಹೊರಗೆ ಹೋಗದಂತೆ ಹದ್ದು ಬಂದಿಯಲ್ಲಿಟ್ಟುಬಿಡುತ್ತದೆ. ಹೀಗ ಭಾನುವಾರದ ರಜಾ, ಅಭ್ಯಂಜನದ ಸಜಾ ಆಗಿ ಪರಿಣಮಿಸುತ್ತದೆ.

(8) ಅನ್ನಕ್ಕಿಂತಲೂ ಅಭ್ಯಂಜನ ಮಿಗಿಲೆಂಬುದು ಅಜ್ಜಯ್ಯನ ಧ್ಯೇಯೋಕ್ತಿ. ಏಕೆಂದರೆ ವಾರಕ್ಕೊಂದು ಅಭ್ಯಂಜನ ಮಾಡುತ್ತಿದ್ದರೆ ಅಮೃತತ್ವ ಲಭಿಸುವದೆಂದು ಅವರು ನಂಬಿದ್ದರು.

(9) ಅಭ್ಯಂಜನದಿಂದ ಅಮೃತತ್ವವೆಂದು ನಂಬಿದ ಅಜ್ಜಯ್ಯನವರು ಒಂದು ದಿನ ಸತ್ತೇ ಹೋಗಿಬಿಟ್ಟರು. ತಮ್ಮ ನಂಬುಗೆಯಂತೆ ಅವರು ಸ್ವರ್ಗಕ್ಕೆ ಹೋಗಿರಬೇಕೆಂದು ಲೇಖಕರು ವಿಡಂಬನೆ ಮಾಡುತ್ತಾರೆ. ಅಲ್ಲಿ ಸ್ವರ್ಗದಲ್ಲಿ 24 ಗಂಟೆ ಅಭ್ಯಂಜನ ಮಾಡಿದರೂ ಬೇಡ ಎನ್ನುವವರಿಲ್ಲ. ಈಶ್ವರನನ್ನು ಅನನ್ಯ ಭಕ್ತಿಯಿಂದ ಉಪಾಸನೆ ಮಾಡಿದ್ದಕ್ಕೆ ಇಷ್ಟಾದರೂ ಫಲ ಕೊಡಬಾರದೇ ಎಂದು ಕೇಳಿರುವರು.

(10) ಈ ಮಾತಿನಲ್ಲಿರುವುದು ಸರಕಾರ ಇಲ್ಲವೆ ಸಾರ್ವಜನಿಕ ಸಂಸ್ಥೆಗಳ ವಿಡಂಬನೆ. ತಮಗೆ ಬೇಕಾದವರಿಗೆ ಸಂಬಳ ಕೊಡಬೇಕೆಂದು ಹೊಸ ಹೊಸ ಇಲಾಖೆಗಳು ನಿರ್ಮಾಣವಾಗುತ್ತವೆ. ಇದರ ವಿಡಂಬನೆ ಇಲ್ಲಿದೆ.

(11) ಅಭ್ಯಂಜನಕ್ಕಾಗಿ ಬಚ್ಚಲು ಮನೆಯಲ್ಲಿ ಸಕಲ ಸಿದ್ಧತೆ ಮಾಡಿರುವರು. ಅಲ್ಲಿ ಒಂದು ದೊಡ್ಡ ಒಲೆ. ಬಾಯಿ ಮೂರಡಿ ಎತ್ತರ, ಮೂರಡಿ ಅಗಲ. ಒಲೆಯ ಮೇಲೆ ಎರಡು ದೊಡ್ಡ ಹಂಡೆ ಹುಗಿದಿರುವರು. ಅವು ತೂತು ಬಿದ್ದು ನೀರು ಸೋರುವವರೆಗೂ ಅಲ್ಲಿಯೇ ಚಿರಸ್ಥಾಯಿ ಹೊರಗೆ ತೆಗೆಯುವಂತಿಲ್ಲ. ತೊಳೆಯುವ ಹಾಗಿಲ್ಲ. ಗೇಣುದ್ದ ದಪ್ಪ ಹೊಲಸು ಅಂಟಿಕೊಂಡು ಹಂಡೆ ಕಡಿಮೆ ನೀರು ಹಿಡಿದರೂ ಹೊರಗೆ ತೆಗೆಯುವಂತಿಲ್ಲ. ಹೊರತೆಗೆಯ ಬೇಕಾದರೆ ಒಲೆಗಳನ್ನೇ ಒಡೆಯಬೇಕಲ್ಲ. ಆ ಒಲೆಯೊಳಗಿನ ಕಿಚ್ಚು ನಿಗಿ ನಿಗಿ ನಾಲಿಗೆ ಚಾಚುತ್ತಿರುತ್ತದೆ. ಗಾತ್ರ ಸತ್ವಗಳಲ್ಲಿ ಅದು 3-4 ಹೆಣಗಳನ್ನು ಒಮ್ಮೆಲೇ ಸುಡಬಲ್ಲುದು. ಅಲ್ಲಿ ಸಣ್ಣಸಣ್ಣ ಕಟ್ಟಿಗೆ ಹಾಕುವಂತಿಲ್ಲ. ದೊಡ್ಡ ದೊಡ್ಡ ಬೊಡ್ಡಿಗಳನ್ನೇ ಹಾಕಿಬಿಡುವರು. ನೀರು ಬರಿ ಕಾಯುವದಲ್ಲ, ಕತ ಕತ ಕುದಿಯಬೇಕು. ಅಕ್ಕಿ ಹಾಕಿದರೆ ಅನ್ನವಾಗುವಷ್ಟು ಕುದಿಯಬೇಕು. ಹೀಗೆ ಇದೆ ಒಲೆ ಮತ್ತು ನೀರಿನ ವಿಡಂಬನೆ ಬಚ್ಚಲು ಮನೆಯ ಬೆಂಕಿಕುಂಡರೆ ಬಡಬಾಗ್ನಿಯ ಮರಿ ಇದ್ದಂತೆ.

12) ನೀರು ಕಾಯಿಸುವುದು, ಅದನ್ನು ಕಡಾಯಿಗೆ ತೋಡುವುದು, ಮೈಗೆ ಎಣ್ಣೆ ಹಚ್ಚಿ ಉಜ್ಜುವುದು, ಎಣ್ಣೆ ಹಚ್ಚಿಕೊಂಡು ಮೈನೆನೆದ ಮೇಲೆ 12-13 ಅಡಿ ಉದ್ದವಾದ ದೋಣಿಯಲ್ಲಿ ಮಲಗುವುದು, ಕತ ಕತನೆ ಕುದಿಯುವ ಕುದಿ ನೀರನ್ನು ಕಡಾಯಿಗಳಿಗೆ ತೋಡುವುದು, ಪಾನಕ ಸಿದ್ಧ ಮಾಡಿ ಎಣ್ಣೆ ಹಚ್ಚಿ ಉಜ್ಜಿ ದಣಿದುಕೊಂಡವರಿಗೆಲ್ಲ ಅದನ್ನು ಕುಡಿಸುವುದು, ಸುಡುನೀರನ್ನು ಎರೆದುಕೊಂಡು ಕೆಲಕಾಲ ಸುಡು ನೀರಿನ ದೋಣಿಯಲ್ಲಿ ಮಲಗುವುದು, ಮತ್ತು ಸೀಗೆಯಿಂದ ಮೈಯುಜ್ಜುವುದು, ಮೂರ್ಛೆ ಹೋದ ಅಜ್ಜಯ್ಯನವರಿಗೆ ಶೈತ್ಯೋಪಚಾರ ಮಾಡುವುದು, ಸ್ನಾನ ಮುಗಿದು ಗಂಗೆ, ಯಮುನೆ ಮೊದಲಾದ ಪುಣ್ಯ ನದಿಗಳ ನಾಮಸ್ಮರಣೆ ಮಾಡಿ ಕೆಳಗೆ ಬಂದು ಕಂಬಳಿ ಮೊದಲಾದುವನ್ನು ಹೊದ್ದುಕೊಂಡು ಮಲಗಿ ಬೆವರಿಸಿಕೊಳ್ಳುವುದು — ಇವೆಲ್ಲ ಅಭ್ಯಂಜನದ ಮಹತ್ವದ ಘಟ್ಟಗಳು. ಆ ರಾತ್ರಿ ಸಂಪೂರ್ಣ ಉಪವಾಸ.

(13) ಅಜ್ಜಯ್ಯನ ಅಭ್ಯಂಜನದಲ್ಲಿ ಅತ್ಯಂತ ಹಾಸ್ಯಮಯವಾಗಿರುವುದು ಮಕ್ಕಳ ಅಭ್ಯಂಜನದ ವರ್ಣನೆ. ಮೊದಲ ನೆಯದಾಗಿ ಅವರಿಗೆ ಎಣ್ಣೆ ಹಚ್ಚಿ, ಮೈಯುಜ್ಜಿ ಸ್ನಾನ ಮಾಡಿಸುವ ಆಳುಗಳೆಂದರೆ ಶಾಲೆಯಲ್ಲಿ ಅವರಿಗೆ ಮೇಷ್ಟ್ರಾಗಿ ಅ ಆ ಇ ಈ ಕಲಿಸುವ ಶಿಕ್ಷಕರೆ. ಆ ಗುರುಗಳೇ ಈ ಮನೆಯಲ್ಲಿ ಕೂಲಿಯಾಳುಗಳಾಗಿರುವುದು ಸನ್ನಿವೇಶದ ಸ್ವಾರಸ್ಯವನ್ನು ಹೆಚ್ಚಿಸುತ್ತದೆ. ಅಲ್ಲದೆ ಅಲ್ಲಿ ಸಾಮಾಜಿಕ ವಿಡಂಬನೆಯೂ ಉಂಟು. ಆ ಮನೆಯ ವಿಶ್ವ ವಿದ್ಯಾಲಯದಲ್ಲಿ ಓದುವ 7-8 ಜನ ಹುಡುಗರಿಗೆ ಕಲಿಸುವ ಪ್ರಿನ್ಸಿಪಾಲರೇ ಎಣ್ಣೆ ಹಚ್ಚುವುದು. ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಇದ್ದ ಸ್ನೇಹ (ಎಣ್ಣೆ) ಸಂಬಂಧ ಆದರ್ಶಮಯವೆಂದು ಹೇಳಿ ನಮ್ಮನ್ನು ನಗೆಗಡಲಲ್ಲಿ ತೇಲಿಸುತ್ತಾರೆ.

ಎಣ್ಣೆ ಹಚ್ಚಿಸಿಕೊಳ್ಳುತ್ತಾ ತಿಮ್ಮು ಕಿಟ್ಟನೆ ಕೂಗಿಕೊಂಡ. ಮಾವಿನಮರದಿಂದ ಬಿದ್ದಾಗ ಉಂಟಾಗಿದ್ದ ಗಾಯವನ್ನು ಮುಚ್ಚಿಟ್ಟಿದ್ದ. ಈಗ ಎಣ್ಣೆ ಉಜ್ಜುವಾಗ ಅಲ್ಲಿ ನೋವಾಯಿತೆಂದೋ, ಅಥವಾ ಗುಟ್ಟು ರಟ್ಟಾಯಿತೆಂದೋ ಕಿರುಚಿಕೊಂಡ ತಿಮ್ಮು ಹಾಸುವಿನ ತಲೆಯ ಮೇಲಿನ ಎಣ್ಣೆ ಹಣೆಗೆ ಬಂದು ಅಲ್ಲಿಂದ ಕಣ್ಣು ಸೇರಿದಾಗ ಬಿದ್ದು ಬಿದ್ದು ಅಳತೊಡಗಿದ. ತಿಮ್ಮುವನ್ನು ಸಮಾಧಾನ ಮಾಡಿದ ಐಗಳು ಈಗ ವಾಸುವನ್ನು ಸಮಾಧಾನ ಮಾಡಬೇಕಾಯಿತು. ಮಾನು ಎಣ್ಣೆಯ ಕುಡಿಕೆಯನ್ನು ಚೆಲ್ಲಿ ಅದನ್ನು ಬಳಿದು ಮೈಗೆ ಹಚ್ಚಿಕೊಳ್ಳುತ್ತಿದ್ದಾನೆ. ಭೂಮಿ ಅದನ್ನು ಹೀರುತ್ತಿರುತ್ತದೆ. ಹೀಗೆ ಚಿಕ್ಕ ಮಕ್ಕಳ ಅಭ್ಯಂಜನದ ಸನ್ನಿವೇಶ ಸ್ವಾರಸ್ಯಕರವಾಗಿ ನಿರೂಪಿತವಾಗಿದೆ.

(14) (1) ಪತ್ರಿಕೆಗಳ ವಿಡಂಬನೆ ಶಾಂತಿಭಂಗಕಾರಿಗಳಾಗಿರುವ ಚಿತ್ರಗುಪ್ತನ ದಫ್ತರಿಗಳಂತಿರುವ ಪತ್ರಿಕೆಗಳ ಗಲಭೆ

(2) ಬೇಜಾರು ಕಳೆಯಲು ಉಪನ್ಯಾಸ ಮಂದಿರಗಳಿಗೆ ಹೋಗಿ, ಭಾಷಣ ಕೇಳಿ ಬೇಜಾರಿಗೆ ಬದಲು ಅಶಾಂತಿಯನ್ನು ತುಂಬಿಕೊಂಡು ಬರುವುದು.

(3) ಪೋಲೀಸರ ಕಾಟ; ಜಮಾಬಂದಿಯ ಊಟ. ಇವು ಉತ್ಕ್ರಾಂತಿಗೆ ಸೇರಿವೆ.

(4) ಬಯಲು ಸೀಮೆಯವರು ಐದೇ ನಿಮಿಷದಲ್ಲಿ ಸ್ನಾನ ಮಾಡಿ ಎರಡೇ ನಿಮಿಷದಲ್ಲಿ ಊಟ ಮಾಡುವರು.

(5) ನಮಗೆ ಅವರು ಮೇಷ್ಟ್ರು ಆದರೂ ನಮ್ಮ ಹಿರಿಯರಿಗೆ ಕೂಲಿಯಾಳುಗಳು. ಅ, ಆ, ಇ, ಈ ಕಲಿಸುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನ ಮಾಡಿಸುವುದು, ಬಟ್ಟೆ ಒಗೆಯುವುದು, ಕಸ ಗುಡಿಸುವುದು, ಆಳಿನ ಲೆಕ್ಕ ಇಡುವುದು, ದೇವರ ಪೂಜೆ ಮಾಡುವುದು ಅವರ ಕೆಲಸಗಳಾಗಿದ್ದವು.

(6) ಅಜ್ಜಯ್ಯ ಸತ್ತು ಸ್ವರ್ಗಕ್ಕೆ ಹೋಗಿರಬೇಕು. ಅಲ್ಲಿ 24 ಗಂಟೆ ಅಭ್ಯಂಜನ ಸ್ನಾನವಾಗುತ್ತಿರಬೇಕು. ಈಶ್ವರ ಪ್ರೇಮಕ್ಕೆ ಅಷ್ಟಾದರೂ ಪ್ರತಿಫಲಬೇಡವೆ?

(7) ಯಾರಿಗೂ ಸಂಬಳ ಕೊಡಬೇಕೆಂದು ಇಲಾಖೆ ನಿರ್ಮಿತವಾಗಿಲ್ಲ.

(8) ಉಪಾಧ್ಯಾಯರು ವಿದ್ಯಾರ್ಥಿಗಳು ಎಂದರೆ ಹೀಗಿರಬೇಕು. ಏನು ಮೈತ್ರಿ? ಏನು ಸೇವೆ? ಎಷ್ಟು ಕರುಣೆ! ಈಗ ಉಪಾಧ್ಯಾಯರು ವಿದ್ಯಾರ್ಥಿಗಳ ಸಂಬಂಧ ಕಡಿದು ಹೋಗಿದೆಯೆಂದು ಕೂಗಿಕೊಳ್ಳುವವರು ನಮ್ಮ ಮನೆಯ ವಿಶ್ವವಿದ್ಯಾಲಯವನ್ನು ನೋಡಬೇಕು. ನಮ್ಮ ಈ ಸನಾತನ, ಪುರಾತನ ಪವಿತ್ರ ಪುಣ್ಯಭೂಮಿಯಾದ ಭಾರತ ವರ್ಷದ ಮಾತಂತಿರಲಿ ಸಮಗ್ರ ಜಗತ್ತಿಗೇ ಕ್ಷೇಮ ಉಂಟಾಗುವುದರಲ್ಲಿ ಸಂಶಯವಿಲ್ಲ.

(9) ಪಾನಕ ಸಿದ್ಧ ಮಾಡಿ ಮೈಯುಜ್ಜಿ ದಣಿದವರಿಗೆ ಕುಡಿಯಲು ಕೊಡುವುದಿಲ್ಲ. ಮೈಯುಜ್ಜಿಸಿ ಕೊಂಡವರಿಗೆ ಕೊಡುವುದು.

**ಅಭ್ಯಾಸ-2**

**ಬಿಟ್ಟ ಪದಗಳು**

(1) ಕ್ರಾಂತಿ
(2) ಮಹಾಕಾರ್ಯ
(3) ಕೂಲಿಯಾಳುಗಳು
(4) ಅಭ್ಯಂಜನದ ಸಜಾ
(5) ಅಮೃತತ್ವ
(6) ಹಚ್ಚಿಸಿಕೊಂಡು ಆಯಾಸಪಟ್ಟವರಿಗೆ
(7) ದಕ್ಷತೆಯ